ಮೇಲಿನಂತೆ ಪ್ರಕರಣಗಳು ಬಾಕಿ ಇರುತ್ತವೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆ ಈ ಮೇಲ್ಮನವಿಗಳು ಎನ್ನುವ ವಿಚಾರವನ್ನು ಹೇಳಿದ್ದೆ. ಬಹುಶಃ ಅದು ತಪ್ಪಾಗಿ ಅರ್ಜಿಗಳು ಎಷ್ಟು ಬಂದಿದೆ ಎಂದು ನಾನು ಕೇಳಬೇಕಾಗಿತ್ತು. ಅದೇ ರೀತಿ ಕಳೆದ ಮೂರು ವರ್ಷಗಳಿಂದ 486 ಅರ್ಜಿಗಳು ವಿಲೇವಾರಿಯಾಗಲಿಕ್ಕೆ ಬಾಕಿ ಇದೆ. ಅದರರ್ಥ ಕಡಿಮೆ ಸಂಖ್ಯೆಯಲ್ಲ. ತೀರ್ಮಾನ ಆಗತಕ್ಕಂಥದ್ದು ವಿಳಂಬವಾಗುವುದಕ್ಕೆ ಕಾರಣವೇನು? ಬಹುಶಃ ತಾವು ಬೇರೆ ಬೇರೆ ಕಾರಣಗಳನ್ನು ಕೊಟ್ಟಿದ್ದೀರಿ, ಅವರು ಕೋರ್ಟಿಗೆ ಹೋಗುತ್ತಾರೆ, ಬೇರೆ ಬೇರೆ ಸಮಸ್ಯೆಗಳಿವೆ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಆದರೆ ತುರ್ತು ನ್ಯಾಯ ಸಿಗಲಿಕ್ಕೆ ತಾವು ಕ್ರಮ ಕೈಗೊಳ್ಳಬೇಕು ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ ತುರ್ತು ನ್ಯಾಯ ಸಿಗಲಿಕ್ಕೆ ಮಾನ್ಯ ಸದಸ್ಯರ ಭಾವನೆಯಂತೆ ಕ್ರಮ ಕೈಗೊಳ್ಳುತ್ತೇನೆ.

ವಿಷಯ:- ರಾಜ್ಯದಲ್ಲಿ ಅಂಡರ್ ವ್ಯಾಲ್ಯುಯೇಶನ್ ಪ್ರಕರಣದ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 88 (372)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಳೆದ 5 ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರದವರ ಗಮನಕ್ಕೆ ಬಂದ ಅಂಡರ್ ವ್ಯಾಲ್ಯುಯೇಶನ್ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಪ್ರತ್ಯೇಕ ವಿವರ ಒದಗಿಸುವುದು)

ಆ) ಒಂದು ವರ್ಷದ ಅವಧಿಗಿಂತಲೂ ಹೆಚ್ಚು ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ಈ ವಿಳಂಬಕ್ಕೆ ಕಾರಣವೇನು?

ಈ) ಇಂತಹ ಪ್ರಕರಣಗಳನ್ನು ಇತ್ಯರ್ಥ ಮಾಡುವ ಅವಧಿ ನಿಗದಿ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) 99,656. ಕಳೆದ 5 ವರ್ಷಗಳ ಅಂಡರ್ ವ್ಯಾಲ್ಯುಯೇಷನ್ ಪ್ರಕರಣಗಳ ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

1. ಬೆಳಗಾಂ	-	7,996	13. ಮಂಗಳೂರು	3597
2. ಬಳ್ಳಾರಿ	-	621	14. ಮಡಿಕೇರಿ	1160
3. ಬೀದರ್	-	1,152	15. ಮೈಸೂರು	2694
4. ಬಿಜಾಪುರ	-	2,971	16. ರಾಯಚೂರು	3252
5. ಚಿಕ್ಕಮಗಳೂರು	-	1,993	17. ಶಿವಮೊಗ್ಗ	1829
6. ಚಿತ್ರದುರ್ಗ	-	1,402	18. ತುಮಕೂರು	7529
7. ಧಾರವಾಡ	-	5,773	19. ಬೆಂ.(ಗ್ರಾ)	7957
8. ಗುಲ್ಬರ್ಗಾ	-	1,457	20. ಶಿವಾಜಿನಗರ	11862
9. ಹಾಸನ	-	2,949	21. ರಾಜಾಜಿನಗರ	9633
10. ಕಾರವಾರ	-	1,167	22. ಗಾಂಧಿನಗರ	6847
11. ಕೋಲಾರ	-	1,489	23. ಜಯನಗರ	4641
12. ಮಂಡ್ಯ	-	3,847	24. ಸ.ನೊ.ಮ.ಪ. (ಆಡಿಟ್)	5638
ಒಟ್ಟು				99,656

ಆ) 32,571.

ಇ) ಈ ಪ್ರಕರಣಗಳು ಅರೆನ್ಯಾಯಿಕ ಪ್ರಕರಣಗಳಾಗಿದ್ದು, ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಪ್ರಕರಣ 45 'ಎ' ಮತ್ತು ಅದರಡಿ ರಚಿಸಿದ ನಿಯಮ ಕರ್ನಾಟಕ ಸ್ಟ್ಯಾಂಪ್ (ಲಿಖಿತಗಳ ಕಡಿಮೆ ಮೌಲ್ಯಮಾಪನವನ್ನು ತಡೆಗಟ್ಟುವ)ನಿಯಮಗಳು 1977ರಲ್ಲಿ ವಿವರಿಸಿದ ವಿಧಿ-ವಿಧಾನಗಳನ್ನು ಅನುಸರಿಸಿ ಅವಶ್ಯವಿದ್ದ ಕಡೆ ಸ್ಥಳ ಪರಿಶೀಲನೆ ಮಾಡಿ, ಪ್ರಕರಣ ಇತ್ಯರ್ಥಪಡಿಸಬೇಕಾಗುತ್ತದೆ. ಕೆಲವು ಪ್ರಕರಣಗಳಲ್ಲಿ ಸಂಬಂಧಪಟ್ಟ ಕಕ್ಷಿದಾರರು ಸಹಾ ಸಹಕರಿಸದೇ ಇದ್ದುದರಿಂದ, ಇತ್ಯರ್ಥವಾಗಲು ವಿಳಂಬವಾಗುತ್ತಿದೆ.

ಈ) ಈ ಪ್ರಕರಣಗಳು ಅರೆ-ನ್ಯಾಯಿಕ ಪ್ರಕರಣಗಳಾಗಿರುವುದರಿಂದ, ಕಾಲಮಿತಿ ನಿಗದಿಪಡಿಸಲು ಬರುವುದಿಲ್ಲ. ಆದಾಗ್ಯೂ ಸಂಬಂಧಪಟ್ಟ ಜಿಲ್ಲಾ-ನೋಂದಣಾಧಿಕಾರಿಗಳಿಗೆ ಈ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸರ್ಕಾರದಿಂದ ಮತ್ತು ನೋಂದಣಿ ಮಹಾ ಪರಿವೀಕ್ಷಕರಿಂದ ನಿರ್ದೇಶನಗಳನ್ನು ನೀಡಲಾಗುತ್ತಿದೆ.

+ಶ್ರೀ ಗೋವಿಂದಪ್ಪ ಎಂ.ಕಾರಜೋಳ:- ಮಾನ್ಯ ಅಧ್ಯಕ್ಷರೇ, ಈ ಅಂಡರ್ ವ್ಯಾಲ್ಯುಯೇಷನ್ ಪ್ರಕರಣಗಳಲ್ಲಿ ಅರೆ-ನ್ಯಾಯಿಕ ಪ್ರಕರಣಗಳಾಗಿರುವುದರಿಂದ ಕಾಲಮಿತಿಯನ್ನು ನಿಗದಿಪಡಿಸುವುದಕ್ಕಾಗುವುದಿಲ್ಲ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಆದರೆ 32 ಸಾವಿರ ಪ್ರಕರಣಗಳಿಗಿಂತಲೂ ಹೆಚ್ಚಿಗೆ ಒಂದು ವರ್ಷದ ಅವಧಿಗಿಂತಲೂ ಹೆಚ್ಚು ಪೆಂಡಿಂಗ್ ಉಳಿದಿವೆ. ಆ ಪ್ರಕರಣಗಳನ್ನು ಇತ್ಯರ್ಥಮಾಡಲಿಕ್ಕೆ ನಾವು ಕಾಲಮಿತಿಯನ್ನು ನಿಗದಿಪಡಿಸಬೇಕು ಎಂದು ಕೇಳಿದ್ದೇನೆ. ಆದರೆ ಸರ್ಕಾರ ಅದು ಸಾಧ್ಯವಿಲ್ಲ. ಇವು ಅರೆನ್ಯಾಯಿಕ ಪ್ರಕರಣಗಳು ಎಂದು ಹೇಳಿ ಉತ್ತರ ಕೊಟ್ಟಿದೆ. ಅರೆನ್ಯಾಯಿಕ ಪ್ರಕರಣಗಳು ಎನ್ನುವ ಕಾರಣಕ್ಕಾಗಿ ಒಂದು ಕುಂಟು ನೆಪ ಒಡ್ಡಿ ಸರ್ಕಾರ ವರ್ಷಾನುಗಟ್ಟಲೆ ತಡಮಾಡಿದರೆ ಕೋಟ್ಯಾಂತ ರೂಪಾಯಿ, ಲಕ್ಷಾಂತರ ರೂಪಾಯಿ ಹಣ ಕೊಟ್ಟು ಆಸ್ತಿ ಖರೀದಿ ಮಾಡಿದವರ ಹೆಸರಿಗೆ ಆಸ್ತಿಯು ವರ್ಗಾವಣೆಯಾಗದಿದ್ದರೆ ಅವರಿಗೆ ತೊಂದರೆಯಾಗುತ್ತದೆ. ಅವರು ಆ ಭೂಮಿಯನ್ನು ಅಭಿವೃದ್ಧಿಪಡಿಸುವುದಕ್ಕೂ ಆಗುವುದಿಲ್ಲ. ಅದರ ಮೇಲೆ ಯಾವ ವ್ಯವಹಾರವನ್ನು ಮಾಡಲಿಕ್ಕಾಗುವುದಿಲ್ಲ. ಅದಕ್ಕಾಗಿ ಮೂರು ತಿಂಗಳು, ಆರು ತಿಂಗಳು ಎಂದು ಕಾಲಮಿತಿಯನ್ನು ನಿಗದಿಪಡಿಸಿ ಕಾನೂನಿಗೆ ತಿದ್ದುಪಡಿ ಮಾಡಬೇಕು. ಅಷ್ಟೇ ಅಲ್ಲ, ಮುನಿಸಿಪಾಲಿಟಿಯಲ್ಲಿ ಏನು ಮನೆಕಟ್ಟಲಿಕ್ಕೆ ಪರವಾನಿಗೆ ಕೋರಿದವರಿಗೆ 30 ದಿವಸದೊಳಗಾಗಿ ಮುನಿಸಿಪಾಲಿಟಿ ಅಧಿಕಾರಿಗಳು ಪರವಾನಗಿಯನ್ನು ಕೊಡದಿದ್ದರೆ ಪರವಾನಗಿ ಒಪ್ಪಿಗೆಯಾಗಿದೆ, ಯಾವ ರೀತಿ ಅನುಮೋದನೆಯಾಗಿದೆ ಎಂದು ಯಾವ ರೀತಿ ಕಾನೂನಿನಲ್ಲಿ ಅವಕಾಶ ಇದೆ, ಆದೇ ರೀತಿಯಾಗಿ ಕಾನೂನನ್ನು ತಿದ್ದುಪಡಿ ಮಾಡಿ ಕಾಲಮಿತಿಯನ್ನು ನಿಗದಿಪಡಿಸಿ ಸರ್ಕಾರ ಆದೇಶ ಹೊರಡಿಸುವುದಕ್ಕೆ ಸಿದ್ಧ ಇದೆಯೋ ಎನ್ನುವುದು ಒಂದು. ಇನ್ನೊಂದು ಈ ಖರೀದಿದಾರರು ಮತ್ತು ಮಾರಾಟಗಾರರು ಸಬ್‌ರಿಜಿಸ್ಟ್ರಾರ್‌ರವರ ಆಫೀಸಿಗೆ ಹೋದಾಗ ಅಲ್ಲಿ ಕುಳಿತುಕೊಳ್ಳುವುದಕ್ಕೆ ಆಸನಗಳು ಜಾಸ್ತಿ ಇಲ್ಲ. ನೆರಳಿನ ವ್ಯವಸ್ಥೆ ಇಲ್ಲ. ಹೀಗಾಗಿ ಮೂರು ನಾಲ್ಕು ಗಂಟೆ ಜನರು ರಸ್ತೆಯ ಮೇಲೆಯೇ ನಿಲ್ಲಬೇಕಾಗುತ್ತದೆ. ಅದಕ್ಕೆ ಸರ್ಕಾರ ಆಸನಗಳ ವ್ಯವಸ್ಥೆ ಮತ್ತು ವೈಟಿಂಗ್ ಹಾಲನ್ನು ಕಟ್ಟಲಿಕ್ಕೆ ಸಿದ್ಧವಿದೆಯಾ ಎನ್ನುವುದು ಒಂದು ಪ್ರಶ್ನೆ. ಇನ್ನೊಂದು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಕಾಪಿ ಮಾಡುವ ನಕಲು ತಯಾರಕರ ಸಂಖ್ಯೆ ಬಹಳ ಕಡಿಮೆ ಇರುವುದರಿಂದ ಖರೀದಿದಾರರಿಗೆ ಖರೀದಿಪತ್ರ ಸಾಮಾನ್ಯವಾಗಿ ಬಹಳ ವಿಳಂಬವಾಗುತ್ತದೆ. ಆರು ತಿಂಗಳು, ಒಂಭತ್ತು ತಿಂಗಳಿಗೆ ಕಳುಹಿಸಿಕೊಡುತ್ತಾರೆ. ಅದಕ್ಕಾಗಿ ಸಿಬ್ಬಂದಿ ಹೆಚ್ಚಿಗೆ ಮಾಡಿ ಖರೀದಿಪತ್ರ 30 ದಿವಸದ ಒಳಗಾಗಿ ಕೊಡಿಸುವಂಥ ವ್ಯವಸ್ಥೆ ಮಾಡಲಿಕ್ಕೆ ಸರ್ಕಾರ ಸಿದ್ಧವಿದೆಯೇ ಎಂಬ ಪ್ರಶ್ನೆಯನ್ನು ಕೇಳುತ್ತೇನೆ.

+ಶ್ರೀ ರಮೇಶ್ ಎಸ್.ಜಿಗಜಿಣಗಿ:- ಮಾನ್ಯ ಅಧ್ಯಕ್ಷರೇ, ಈ ಅಂಡರ್ ವ್ಯಾಲ್ಯುಯೇಷನ್ ಬಹಳ ನೀವು ತಡಮಾಡುತ್ತೀರಿ, ಜನರಿಗೆ ತೊಂದರೆಯಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಅರೆ ನ್ಯಾಯಿಕ ಪ್ರಕರಣಗಳು ಎನ್ನುವುದು ಒಂದೇ ಕಾರಣಕ್ಕೆ ಮಾತ್ರ ಅಲ್ಲಿ ತಡವಾಗುವುದಿಲ್ಲ. ಅಲ್ಲಿ ಪ್ರಕ್ರಿಯೆಗಳನ್ನು

ಕ್ರಮಬದ್ಧವಾಗಿ ಅವರು ನೋಡಬೇಕಾಗುತ್ತದೆ ಮತ್ತು ಪ್ರತಿವಾದಿಗಳ ಅಸಹಕಾರದಿಂದ ಕೆಲವೊಂದು ಸಲ ಅವರು ಪ್ರತಿವಾದಿಗಳು ಬಂದು ನಮಗೆ ಡೇಟ್ ಕೊಡಿ ಎಂದು ಕೇಳುತ್ತಾರೆ. ಅಥವಾ ಅವರು ಡೇಟ್ ಫಿಕ್ಸ್ ಮಾಡಿದಾಗ ಬರುವುದಿಲ್ಲ. ಇದಕ್ಕೆ ತಡಮಾಡಲಿಕ್ಕೆ ಬರೀ ನಮ್ಮ ಕಛೇರಿ ಅಥವಾ ನಮ್ಮ ಅಧಿಕಾರಿಗಳಿಂದಲೇ ತಡವಾಗುವುದಿಲ್ಲ. ತಡವಾಗುವುದಕ್ಕೆ ಇನ್ನು ಬೇರೆ ಬೇರೆ ಕಾರಣಗಳು ಇರುವುದರಿಂದ ತಡವಾಗುತ್ತದೆ ಎನ್ನುವಂಥದ್ದು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸಿ ಅವರು ಇನ್ನೊಂದು ಬಹಳ ಪ್ರಾಮುಖ್ಯವಾದುದು ಏನು ಕೇಳಿದ್ದಾರೆ ಎಂದರೆ ಒಂದು ಕಾಲಮಿತಿಯನ್ನು ನೀವು ನಿಗದಿಪಡಿಸಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆದರೆ ಅದು ಅರೆಕಾಲಿಕ ಪ್ರಕರಣಗಳಾಗಿರುವುದರಿಂದ ಅದಕ್ಕೆ ಕಾಲಮಿತಿಪಡಿಸುವುದು ಬಹಳ ಕಷ್ಟವಾಗುತ್ತದೆ. ಒಂದು ವೇಳೆ ನಾವು ಕಾಲಮಿತಿಯನ್ನು ನಿಗದಿಪಡಿಸಬೇಕಾದರೆ ಈ ಕಾನೂನಿಗೆ ತಿದ್ದುಪಡಿ ತರಬೇಕಾದಂಥ ಕೆಲಸವಾಗಬೇಕಾಗುತ್ತದೆ. ಆದರೆ ತಿದ್ದುಪಡಿ ತರುವುದು ಬಹಳ ಡಿಲೇ ಆಗುತ್ತದೆ. ಆದರೆ ಇನ್ನೊಂದು ಸಲ ನಮ್ಮ ನಿರ್ದೇಶಕರವರಿಗೆ ತಿಳಿಸಿ ಇನ್ನೊಂದು ಸುತ್ತೋಲೆಯನ್ನು ಕಳುಹಿಸಿ ಬೇಗ ಈ ಕೇಸ್‌ಗಳನ್ನು ಇತ್ಯರ್ಥ ಮಾಡುವ ಒಂದು ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಅದರ ಜೊತೆಗೆ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಬಹಳ ಅಸ್ತವ್ಯಸ್ತ ಇದೆ, ಜನರು ಅಲ್ಲಿ ಕೂಡಿಸುವುದಕ್ಕೆ ಏನು ಆಸನಗಳು ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ನಮ್ಮ ಸಬ್‌ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಒಬ್ಬರು ಯಾರೇ ಬಂದು ಒಂದು ಕೋಟಿ, ಎರಡು ಕೋಟಿ ರೂಪಾಯಿ ವ್ಯವಹಾರ ಮಾಡುತ್ತಾರೆ. ಅಲ್ಲಿ ಸ್ಟಾಂಪ್ ಖರೀದಿ ಮಾಡಿರುತ್ತಾರೆ. ಆದರೆ ಅಲ್ಲಿ ಕೂಡುವುದಕ್ಕೆ ಒಂದು ಕುರ್ಚಿ ಇಡುವ ವ್ಯವಸ್ಥೆ ಇಲ್ಲಿಯವರೆಗೆ ನಾವು ಮಾಡಲಿಕ್ಕಾಗಲಿಲ್ಲ. ಆದರೆ ಆದ್ಯತೆಯ ಮೇರೆಗೆ ಇನ್ನು ಮುಂದಿನ ದಿನಮಾನಗಳಲ್ಲಿ ಆ ವ್ಯವಸ್ಥೆಯನ್ನೂ ಕೂಡ ನಾವು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಈ ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ಪತ್ರಗಳು ನೋಂದಣಿಯಾದಮೇಲೆ ಕಾಪಿಗಳನ್ನು ನೀವು ಬಹಳ ತಡಮಾಡಿ ಕೊಡುತ್ತೀರಿ, ಒಂದೊಂದು ವರ್ಷಗಟ್ಟಲೆ ನೀವು ಕಾಯಿಸುತ್ತೀರಿ ಎನ್ನುವುದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಅದನ್ನು ಬೇಗ ಈ ಕಾಪಿಗಳನ್ನು ತಿರುಗಿ ಕೊಡುವ ವ್ಯವಸ್ಥೆ ಯಾವ ರೀತಿ ಮಾಡಬೇಕು ಎನ್ನುವುದರ ಚಿಂತನೆಯಲ್ಲಿ ಸರ್ಕಾರ ಇದೆ. ಅದು ಫೈಲಿಂಗ್ ಸಿಸ್ಟಂ ಆಗಿರಬಹುದು ಅಥವಾ ಮೈಕ್ರೋ ಫೋಟೋ ಕಾಪಿ ಮಾಡತಕ್ಕಂಥದ್ದು ಆಗಿರಬೇಕು. ಎಲ್ಲಾ ವ್ಯವಸ್ಥೆಯನ್ನೂ ಕೂಡ ಮಾಡಲಿಕ್ಕೆ ನಾನು ಪ್ರಯತ್ನಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ಗದಗ್ ಎಪಿಎಂಸಿ ಯವರು ತಮ್ಮ ಹೊಸ ಮಾರ್ಕೆಟ್‌ಯಾರ್ಡ್‌ಗೆ ಸುಮಾರು ಎರಡು ನೂರು ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. 1950ರಿಂದ ಪ್ರಾರಂಭದಲ್ಲಿ ಅದು ಇದೆ. ಅದನ್ನು ಬೇರೆ ಬೇರೆ ಟೈಮ್‌ನಲ್ಲಿ ಬೇರೆ ಬೇರೆ ರೇಟ್‌ಗೆ ಪ್ಲಾಟ್‌ನ್ನು ಮಾರಾಟ ಮಾಡಿದ್ದಾರೆ. ನಮ್ಮ ಡಿಸ್ಟ್ರಿಕ್ಟ್

ರಿಜಿಸ್ಟ್ರಾರ್ ಈಗ ಮಾರ್ಕೆಟ್ ವ್ಯಾಲ್ಯು ಮಾಡಿ ನಿಮ್ಮದು ಅಂಡರ್ ವ್ಯಾಲ್ಯುಯೇಷನ್ ಆಗಿದೆ ಎಂದು ಅವರಿಗೆಲ್ಲಾ ನೋಟೀಸ್ ಕೊಟ್ಟು ಕೆಲವು ಕೇಸುಸ್ ಡಿಸ್‌ಪೋಸ್ ಮಾಡಿ ರೆವಿನ್ಯೂ ಅಧಿಕಾರಿಗಳು ಅದನ್ನು ರಿಕವರಿ ಮಾಡಬೇಕು ಎಂದು ಆರ್ಡರ್ ಮಾಡಿದ್ದಾರೆ. ನಾನು ಈ ಸಮಸ್ಯೆಯನ್ನು ಮಾನ್ಯ ಜಾಲಪ್ಪನವರ ನಜರಿಗೆ ತಂದಿದ್ದೇನೆ. ಅವರು ಮಾರ್ಕೆಟಿಂಗ್ ಮಿನಿಸ್ಟರ್ ಹಿಂದೆ ಇದ್ದುದರಿಂದ ಅವರಿಗೆ ಸಮಸ್ಯೆ ಅರ್ಥವಾಯಿತು. ಕೂಡಲೇ ಅವರು ಅದಕ್ಕೆ ಏನು ಅಮೆಂಡ್‌ಮೆಂಟ್ ಮಾಡಬೇಕೋ ಆ ಪ್ರಪೋಸಲ್ಸ್ ಕಳುಹಿಸಿರಿ ಎಂದು ಕಾರ್ಯದರ್ಶಿಯವರಿಗೆ ನನ್ನ ಎದುರಿನಲ್ಲಿಯೇ ಆದೇಶ ಮಾಡಿದರು. ಆ ಕ್ರಮವನ್ನು ತಾವು ತ್ವರಿತವಾಗಿ ತೆಗೆದುಕೊಳ್ಳುವಿರಾ? ಇಲ್ಲದಿದ್ದರೆ ಅವರಿಗೆ ಅನ್ಯಾಯವಾಗುತ್ತದೆ. ನೀವು ಮಾರ್ಕೆಟ್ ವ್ಯಾಲ್ಯೂಗೆ ದಲಾಲ್ ಅಂಗಡಿ ಪ್ಲಾಟ್ ಖರೀದಿ ಮಾಡಿ ಎಂದರೆ ಐದಾರು ಲಕ್ಷ ರೂಪಾಯಿ ಅದಕ್ಕೆ ಕೊಡಬೇಕಾಗುತ್ತದೆ. ಅಷ್ಟು ಕೊಟ್ಟು ಉದ್ಯೋಗ ಮಾಡುವಂಥ ಅವಕಾಶ ಅವರ್ಯಾರಿಗೂ ಇಲ್ಲ. ಅದಕ್ಕೆ ದಯವಿಟ್ಟು ಈ ಅನ್ಯಾಯವನ್ನು ಕೂಡಲೇ ಬಗೆಹರಿಸಬೇಕು.

ಶ್ರೀ ರಮೇಶ್ ಸಿ.ಜಿಗಜಿಣಗಿ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಈ ವ್ಯಾಪ್ತಿಯಲ್ಲಿ ಅವರಿಗೆ ಉತ್ತರ ಹೇಳುವುದು ನನಗೆ ಸ್ವಲ್ಪ ಕಷ್ಟವಾಗುತ್ತದೆ. ಯಾವ ವಿವರಗಳೂ ಕೂಡ ನನ್ನ ಹತ್ತಿರ ಇಲ್ಲ. ಮಾನ್ಯ ಹಿರಿಯ ಸದಸ್ಯರು ನನಗೊಂದು ಪತ್ರವನ್ನು ಬರೆದು ಕಳುಹಿಸಲಿ. ತಕ್ಷಣ ಅದನ್ನು ನಾಳೆಯೋ ನಾಡಿದ್ದೋ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅವರ ಸಮಸ್ಯೆ ಬಗೆಹರಿಸಿಕೊಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಈಗ ಸನ್ಮಾನ್ಯ ಮಂತ್ರಿಗಳು ಹೇಳಿದರು, ಈ ಕಾನೂನಿಗೆ ತಿದ್ದುಪಡಿ ತರಬೇಕಾಗುತ್ತದೆ, ಇಷ್ಟೇ ನಿಗದಿತ ವೇಳೆಯಲ್ಲಿ ಪ್ರಕರಣಗಳು ಇತ್ಯರ್ಥವಾಗದಿದ್ದರೆ ಅದು ಇತ್ಯರ್ಥವಾದ ಹಾಗೆ ಎಂದು ತಿಳಿದುಕೊಳ್ಳಬೇಕು ಎನ್ನುವುದಕ್ಕೆ ಡೀಮ್ಡ್ ಪ್ರಾವಿಷನ್ ಎಂದು ಏನು ಹೇಳುತ್ತೇವಲ್ಲಾ, ಅದನ್ನು ತರಲಿಕ್ಕೆ ತಿದ್ದುಪಡಿ ತರಬೇಕು ಎಂದು. ಬಹಳ ದಿವಸಗಳಾಗುತ್ತದೆ ಅದಕ್ಕೆ, ಬಹಳ ತಡವಾಗುತ್ತದೆ ಎಂದು ಹೇಳಿದರು. ಏಕೆ ನೀವು ಆರ್ಡಿನೆನ್ಸ್‌ನ್ನು ಹೊರಡಿಸಿ? ಏಕೆಂದರೆ ಈ ತೊಂದರೆಯನ್ನು ನೀವು ಮನಗಂಡಾಗ ತಕ್ಷಣ ಒಂದು ಆರ್ಡಿನೆನ್ಸ್ ಮುಖೇನ ಇದನ್ನು ಸರಿಪಡಿಸಬಹುದು. ಇದು ಒಂದು. ಎರಡನೆಯದು ಎಂದರೆ ನಮ್ಮ ಸ್ನೇಹಿತ ಸದಸ್ಯರು ಅಲ್ಲಿ ಕೂಡುವುದಕ್ಕೆ ಕುರ್ಚಿಗಳೇ ಇಲ್ಲ ಎಂದರು.

ಆದರೆ ನಾವು ಅಲ್ಲಿ ಹೋಗಿ ನಿಲ್ಲುವುದಕ್ಕೆ ರೂಮುಗಳೇ ಇಲ್ಲ ಕೆಲವು ಕಡೆ. ನಮ್ಮ ತಾಲ್ಲೂಕಿನಲ್ಲಿ ಹೋಗಿ ನಿಲ್ಲಬೇಕು. ಏಕೆಂದರೆ ಇದಕ್ಕೆ ಉದಾಹರಣೆ ಎಂದರೆ ಈಗ ನಮ್ಮ ಸಕ್ಕರೆ ಕಾರ್ಖಾನೆಗಳಿಗೆ ಸಾಮಾನು ಕೊಡುವುದಕ್ಕೆ ಬರುತ್ತಾರಲ್ಲಾ,

ಅಧ್ಯಕ್ಷರು:- ತಾವು ಉಪಪ್ರಶ್ನೆ ಕೇಳಬೇಕು.

ಶ್ರೀ ಹೆಚ್.ಶಿವಪ್ಪ:- ಒಂದು ನಿಮಿಷ. ಉಪಪ್ರಶ್ನೆ ಎಂದು ನನಗೆ ಅರ್ಥವಾಗುತ್ತದೆ. I know fully well how the supplement any question should

be formulated and put. But only to substantiate main view point I am just quoting an example. ಈಗ ಏನಾಗುತ್ತದೆ ಎಂದರೆ ಈ ಸಕ್ಕರೆ ಕಾರ್ಖಾನೆಗಳಿಗೆ ಸಾಮಾನು ಕೊಡಲಿಕ್ಕೆ ಬರುವವರು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಹವಾ ನಿಯಂತ್ರಣ ಕೊಠಡಿಯಲ್ಲಿ ಇದ್ದು ನಾವು ತೆಗೆದುಕೊಳ್ಳುವವರು ಕೋಟ್ಯಾಂತರ ರೂಪಾಯಿ ಕೊಡುವವರು 59 ರೂಪಾಯಿ, 60 ರೂಪಾಯಿ, 80 ರೂಪಾಯಿಗೋ ಕೆಂಚಾಂಬ ಲಾಡ್ಜ್‌ಗೆ ಹೋಗಿ ಉಳಿಯಬೇಕಾಗುತ್ತದೆ. ಆ ಪರಿಸ್ಥಿತಿಯಲ್ಲಿ ನಾವು ಹೋಗಿ ಕೋಟ್ಯಾಂತರ ಗಟ್ಟಲೆ ವ್ಯವಹಾರ ಮಾಡುವವರು ನಿಲ್ಲುವುದಕ್ಕೇ ಸ್ಥಳವಿಲ್ಲ. ಮಾನ್ಯ ಮಂತ್ರಿಗಳು ಇದಕ್ಕೆ ತಕ್ಷಣ ಪರಿಹಾರ ತಂದುಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ:- ಮಾನ್ಯ ಅಧ್ಯಕ್ಷರೇ, ಇದು ಒಂದು ಟೈಮ್ ಮಿತಿ ಹಾಕಿ ಪ್ರಕರಣಗಳನ್ನು ಇತ್ಯರ್ಥ ಮಾಡಲಿಕ್ಕೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಅದು ಆಗುವುದಿಲ್ಲ. ಅದಕ್ಕೆ ಕಾಲಮಿತಿಯನ್ನು ಮಾಡಬೇಕಾದರೆ ತಿದ್ದಪಡಿಯನ್ನೇ ನಾವು ಮಾಡಬೇಕಾಗುತ್ತದೆ. ಅದರ ಬಗ್ಗೆ ನೋಡೋಣ. ಅದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕನ್‌ಸಿಡರ್ ಮಾಡುತ್ತೇನೆ. ಆದರೆ ಅಲ್ಲಿ ಪೀಠೋಪಕರಣಗಳ ಬಗ್ಗೆ ಹೇಳುತ್ತಿದ್ದಾರೆ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ, ನಾನು ಈಗಾಗಲೇ ಹೇಳಿದ್ದೇನೆ, ಆದ್ಯತೆಯ ಮೇರೆಗೆ ಸರ್ಕಾರದಲ್ಲಿ ಆಗಿರುವ ಹಣದ ವ್ಯವಸ್ಥೆಯನ್ನು ನೋಡಿ ಆದ್ಯತೆಯ ಮೇರೆಗೆ ಪೀಠೋಪಕರಣಗಳಾಗಿರಬಹುದು.

11-40 ಎ.ಎಂ

ಸಬ್‌ರಿಜಿಸ್ಟರ್ ಕಛೇರಿಯ ಕಟ್ಟಡಗಳು ಕೂಡ ಆಗಿರಬಹುದು. ಉದಾಹರಣೆಗೆ ಈಗ ಹತ್ತು ವರ್ಷಗಳ ಹಿಂದೆ ಇದರ ಆದಾಯ ಬರೇ 40 ಕೋಟಿ ರೂಪಾಯಿ ಇತ್ತು. ಇವತ್ತು ಸುಮಾರು 600 ಕೋಟಿ ರೂಪಾಯಿಗಳ ಆದಾಯ ಈ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಣಿಕೆಯಿಂದ ಬರುತ್ತಿದೆ. ಅದಕ್ಕೆ ಆದ್ಯತೆಯ ಮೇರೆಗೆ ನಾವು ಎಲ್ಲವನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮ್ಮ ಮುಖಾಂತರ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ವಿಷಯ:- ರಾಜ್ಯದ ಹೊರಗಡೆ ಇರತಕ್ಕ ಮುಜರಾಯಿ ಇಲಾಖೆಯ ಪ್ರವಾಸಿಗರ ಛತ್ರಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 89 (599)

ಶ್ರೀ ಮಂಜುನಾಥ ಸಿ.ಕುನೂರ್ (ಶಿಗ್ಗಾಂವ್):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯ ಮುಜರಾಯಿ ಇಲಾಖೆಯಿಂದ ರಾಜ್ಯದಲ್ಲಿ ಹಾಗೂ ರಾಜ್ಯದ